# ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ










## ಎನ್.ಎಸ್.ಸಿ.ಎಫ್.ಡಿ.ಸಿ -ನೇರಸಾಲ ಯೋಜನೆ

- ಈ ಯೋಜನೆಯನ್ನು ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ ನವದೆಹಲಿ ಇವರ ಸಹಯೋಗದೊಡನೆ ಅನುಷ್ಠಾನಗೊಳಿಸಲಾಗುತ್ತಿದೆ.
- ಘಟಕ ವೆಚ್ಚ ರೂ. 1.00 ಲಕ್ಷದಿಂದ ರೂ. 7.50 ಲಕ್ಷದವರೆಗೆ.
- ರೂ. 1.00 ಲಕ್ಷ ಮೇಲ್ಪಟ್ಟ ಸಾಲಗಳಿಗೆ ಘಟಕ ವೆಚ್ಚದ ಶೇ. 70 ರಿಂದ 75 ರಷ್ಟು ಅವಧಿಸಾಲ, ಶೇ. 20 ನಿಗಮದಿಂದ ಬೀಜಧನ ಸಾಲ, ಶೇ. 5 ರಿಂದ 10 ರಷ್ಟು ಪ್ರವರ್ತಕರ ಪಾಲು.
- ಬೀಜಧನ ಸಾಲಕ್ಕೆ ಶೇ. 4 ಹಾಗೂ ಅವಧಿಸಾಲಕ್ಕೆ ಶೇ. 6 ರಂತೆ ಸರಳಬಡ್ಡಿ ವಿಧಿಸಲಾಗುವುದು. ನಿಗದಿತ ಅವಧಿಯಲ್ಲಿ ಅವಧಿ ಸಾಲ ಮರುಪಾವತಿ ಮಾಡದಿದ್ದಲ್ಲಿ ಶೇ. 2 ರ ದಂಡ ಬಡ್ಡಿ ವಿಧಿಸಲಾಗುವುದು.
- ಮರುಪಾವತಿ ಅವಧಿ 60 ಮಾಸಿಕ ಕಂತುಗಳು.

**ಕೈಗೆತ್ತಿಕೊಳ್ಳಬಹುದಾದ ಆರ್ಥಿಕ ಚಟುವಟಿಕೆಗಳು:- (ಉದ್ದೇಶಗಳು)**

- ಟಾಟಾ ಇಂಡಿಕಾ, ಇಟ್ಟಿಗೆ ತಯಾರಿಕೆ, ಬ್ಯೂಟಿ ಪಾರ್ಲರ್, ಇಲೆಕ್ಟ್ರಿಕಲ್ ಷಾಪ್, ಎಲ್.ಪಿ.ಜಿ. ಆಟೋರಿಕ್ಷಾ, ಗೂಡ್ಸ್ ಕ್ಯಾರಿಯರ್, ವಕೀಲರ ಕಛೇರಿ, ಹಿಟ್ಟಿನ ಗಿರಣಿ, ಮಿನಿಡೈರಿ, ಮೆಡಿಕಲ್/ಡೆಂಟಲ್ ಕ್ಲಿನಿಕ್, ಮೆಡಿಕಲ್ ಸ್ಟೋರ್, ಡಿ.ಟಿ.ಪಿ. ಸೆಂಟರ್, ಕೋಳಿ ಸಾಕಣಿಕೆ, ಹಂದಿ ಸಾಕಾಣಿಕೆ, ಟ್ರ್ಯಾಕ್ಟರ್ ಮತ್ತು ಟ್ರೈಲರ್, ಟಾಟ ಸುಮೋ ಮತ್ತು ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ ಅನುಮೋದಿಸಿದ ಇತರೆ ಲಾಭದಾಯಕ ಉದ್ದಿಮೆಗಳು.

**ಸೌಲಭ್ಯ ಪಡೆಯಲು ಅರ್ಜಿದಾರಿಗೆ ಇರಬೇಕಾದ ಅರ್ಹತೆಗಳು:-**

- ಅರ್ಜಿದಾರರು ಪರಿಶಿಷ್ಠ ಜಾತಿಗೆ ಸೇರಿದವರಾಗಿರಬೇಕು.
- ಅರ್ಜಿದಾರರು ಕನಿಷ್ಠ ಕಳೆದ 15 ವರ್ಷಗಳಿಂದ ಕರ್ನಾಟಕದಲ್ಲಿ ವಾಸಿಸುತ್ತಿರಬೇಕು.
- ಅರ್ಜಿದಾರರ ವಯಸ್ಸು 18 ರಿಂದ 60 ವರ್ಷಗಳ ಒಳಗಿರಬೇಕು.
- ಅರ್ಜಿದಾರರ ಕುಟುಂಬದ ಸದಸ್ಯರಲ್ಲಿ ಯಾರೊಬ್ಬರೂ ಸರ್ಕಾರಿ ನೌಕರಿಯಲ್ಲಿರಬಾರದು.

- ಅರ್ಜಿದಾರರು ಅಥವಾ ಅವರ ಕುಟುಂಬದವರು ಈ ಹಿಂದೆ ನಿಗಮದಿಂದ ಯಾವುದೇ ಸೌಲಭ್ಯ ಪಡೆದಿರಬಾರದು.
- ಕುಟುಂಬದ ವಾರ್ಷಿಕ ಆದಾಯ, ಗ್ರಾಮೀಣ ಪ್ರದೇಶದವರಿಗೆ ರೂ. 81000/- ನಗರ ಪ್ರದೇಶದವರಿಗೆ ರೂ. 1,03,000/- ಮೀರಿರಬಾರದು.

<u>ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು (ಜೆರಾಕ್ಸ್ ಪ್ರತಿಗಳು) :-</u>

- ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ -2.
- ಜಾತಿ ಪ್ರಮಾಣ ಪತ್ರ
- ಆದಾಯ ಪ್ರಮಾಣ ಪತ್ರ
- ಪಡಿತರ ಚೀಟಿ
- ಗುರುತಿನ ಚೀಟಿ (ಆಧಾರ್ ಕಾರ್ಡ್/ಚುನಾವಣಾ ಗುರುತಿನ ಚೀಟಿ/ಡ್ರೈವಿಂಗ್‌ಲೈಸನ್ಸ್/ ಪಾನ್‌ಕಾರ್ಡ್/ಭಾವಚಿತ್ರವಿರುವ ಬ್ಯಾಂಕ್ ಪಾಸ್‌ಪುಸ್ತಕ/ಪಾಸ್‌ಪೋರ್ಟ್)
- ವಾಹನ ಉದ್ದೇಶಕ್ಕಾಗಿ ಅರ್ಜಿ ಸಲ್ಲಿಸುವವರು ಖಾಯಂ ಡ್ರೈವಿಂಗ್ ಲೈಸನ್ಸ್ ಹೊಂದಿರಬೇಕು. ಪ್ಯಾಸೆಂಜರ್ ವಾಹನಗಳಿಗೆ ಬ್ಯಾಡ್ಜ್ ಹೊಂದಿರಬೇಕು ಮತ್ತು ವಾಹನದ ಕೊಟೇಷÀನ್ ಸಲ್ಲಿಸಬೇಕು.
- ಕೃಷಿ ಉದ್ದೇಶಕ್ಕಾಗಿ ಅರ್ಜಿ ಸಲ್ಲಿಸುವವರು ಜಮೀನಿನ ಆರ್.ಟಿ.ಸಿ. ಸಲ್ಲಿಸಬೇಕು (ನಕಲು ಪ್ರತಿ).
- ಉದ್ದೇಶಿತ ಕಸುಬಿನಲ್ಲಿ ತರಬೇತಿ ಅಥವಾ ಅನುಭವ ಹೊಂದಿದಲ್ಲಿ ಪ್ರಮಾಣ ಪತ್ರ (ನಕಲು ಪ್ರತಿ).
- ದರಪಟ್ಟಿ ಮತ್ತು ಯೋಜನಾ ವರದಿ

<u>ಫಲಾನುಭವಿಗಳ ಆಯ್ಕೆ ವಿಧಾನ ಹಾಗೂ ಯೋಜನೆ ಅನುಷ್ಠಾನದ ವಿವಿಧ ಹಂತಗಳು:-</u>

- ಸ್ವೀಕರಿಸಿದ ಅರ್ಜಿಗಳನ್ನು ವಿಧಾನಸಭಾ ಕ್ಷೇತ್ರವಾರು ಪಟ್ಟಿ ಮಾಡಿ, ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿಯಲ್ಲಿ ಮಂಡಿಸಲಾಗುವುದು.
- ಆಯ್ಕೆ ಸಮಿತಿಯಿಂದ ಆಯ್ಕೆಯಾದ ಬಗ್ಗೆ ಅರ್ಜಿದಾರರಿಗೆ ಅಂಚೆ/ಎಸ್.ಎಮ್.ಎಸ್ ಮೂಲಕ ತಿಳಿಸಿಲಾಗುವುದು ಅಥವಾ ಅರ್ಜಿದಾರರೇ ನೇರವಾಗಿ ನಿಗಮದ ಅಂತರ್ಜಾಲ ತಾಣದಲ್ಲಿ ಅರ್ಜಿ ಸಂಖ್ಯೆ ದಾಖಲಿಸಿ ತಿಳಿದುಕೊಳ್ಳಬಹುದು.
- ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲ್ಪಟ್ಟ ಅರ್ಜಿದಾರರ ಸ್ಥಳ ಪರಿಶೀಲನೆ ಮಾಡಿ ಅರ್ಹರಿರುವ ಕುರಿತು ಜಿಲ್ಲಾ ಕಛೇರಿಗೆ ವರದಿ ಸಲ್ಲಿಸುವರು.
- ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅರ್ಹರೆಂದು ವರದಿ ಸಲ್ಲಿಸಿದ ಅರ್ಜಿದಾರರು ಮೂಲ ದಾಖಲೆಗಳನ್ನು ಜಿಲ್ಲಾ ಕಛೇರಿಗೆ ಹಾಜರುಪಡಿಸಿ ಜಿಲ್ಲಾ ವ್ಯವಸ್ಥಾಪಕರಿಂದ ಧೃಢೀಕರಿಸಿದ ನಂತರ ಅರ್ಜಿಗಳನ್ನು ಫಲಾನುಭವಿಗಳು ಸೂಚಿಸಿದ ಬ್ಯಾಂಕ್ ಶಾಖೆಗಳಿಗೆ ಸಾಲ ಮಂಜೂರಾತಿಗೆ ಕಳುಹಿಸಿ

ಫಲಾನುಭವಿಗಳಿಗೆ ಅಂಚೆ/ಎಸ್.ಎಮ್.ಎಸ್ ಮೂಲಕ ಮಾಹಿತಿ ಕೊಡಲಾಗುವುದು. ಅಥವಾ ಅರ್ಜಿದಾರರೇ ನೇರವಾಗಿ ನಿಗಮದ ಅಂತರ್ಜಾಲ ತಾಣದಲ್ಲಿ ಅರ್ಜಿ ಸಂಖ್ಯೆ ದಾಖಲಿಸಿ ತಿಳಿದುಕೊಳ್ಳಬಹುದು.

- ಆಯ್ಕೆಯಾದ ಅರ್ಜಿಗಳನ್ನು ಕೇಂದ್ರ ಕಛೇರಿಗೆ ಸಾಲ ಮಂಜೂರಾತಿಗೆ ಕಳುಹಿಸಿ ಕೊಡಲಾಗುವುದು. ಘಟಕ ವೆಚ್ಚ ರೂ. 2.50 ಲಕ್ಷ ಮೇಲ್ಪಟ್ಟ ಪ್ರಸ್ತಾವನೆಗಳು ಉನ್ನತ ಮಟ್ಟದ (HPC) ಸಮಿತಿಯಲ್ಲಿ ಹಾಗೂ ಅದಕ್ಕಿಂತ ಕಡಿಮೆ ಇರುವ ಪ್ರಸ್ತಾವನೆಗಳು ಉಪ ಸಮಿತಿಯಿಂದ (Sub-Committee) ಅನುಮೋದನೆ ಪಡೆದು ಕೇಂದ್ರ ಕಛೇರಿಯಿಂದ ಮಂಜೂರಾತಿ ಆದೇಶ ನೀಡಲಾಗುವುದು.
- ಕೇಂದ್ರ ಕಛೇರಿಯಿಂದ ಮಂಜೂರಾತಿ ಆದೇಶ ಬಂದ ನಂತರ ಅವಧಿಸಾಲ ಮತ್ತು ಬೀಜಧನ ಸಾಲದ ಮೊತ್ತಕ್ಕೆ ಸಂಬಂಧಿಸಿದಂತೆ ಛಾಪಾ ಕಾಗದದಲ್ಲಿ ದಾಖಲೆಗಳು ಹಾಗೂ ಕ್ರಾಸ್ ಮಾಡಿದ 10 ಚೆಕ್ ಹಾಳೆಗಳನ್ನು "ಜಿಲ್ಲಾ ವ್ಯವಸ್ಥಾಪಕರು, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ----- ಜಿಲ್ಲೆ" ಇವರ ಹೆಸರಿಗೆ ಬರೆದು ದಿನಾಂಕ ಹಾಗೂ ಮೊತ್ತ ನಮೂದಿಸದೆ ಸಹಿ ಮಾಡಿ ಸಲ್ಲಿಸಬೇಕು.
- ನಿಗಮದಿಂದ ಪಡೆಯುವ ಬೀಜಧನಸಾಲ ಹಾಗೂ ಅವಧಿಸಾಲಕ್ಕೆ ಜಾಮೀನು ನೀಡಬೇಕು.
- ಪೂರಕ ಭದ್ರತೆಯಾಗಿ ನಿಗದಿಪಡಿಸಿದ ಮೊತ್ತಕ್ಕೆ ಫಲಾನುಭವಿಯ ಅಥವಾ ಮೂರನೇ ವ್ಯಕ್ತಿಗೆ ಸಂಬಂಧಿಸಿದ ಸ್ಥಿರಾಸ್ಥಿಯನ್ನು (ಕಟ್ಟಡ/ನಿವೇಶನ/ಜಮೀನು) ನಿಗಮಕ್ಕೆ ಆಧಾರ ಮಾಡಬೇಕು ಅಥವಾ ಜೀವವಿಮಾ ಪಾಲಿಸಿ/ನಿಗದಿತ ಠೇವಣಿ/ಎನ್.ಎಸ್.ಸಿ ಗಳನ್ನು ನಿಗಮಕ್ಕೆ ಲೀನ್ ಮಾಡಿಕೊಡಬೇಕು.
- ವಾರಸುದಾರರನ್ನು ನೇಮಿಸಬೇಕು. (ಒಂದು ವೇಳೆ ಫಲಾನುಭವಿಯು ಮರಣ ಹೊಂದಿದಲ್ಲಿ ಸಾಲವನ್ನು ತೀರಿಸುವ ಜವಾಬ್ದಾರಿ ಹೊರುವವರು.)
- ಫಲಾನುಭವಿ ವಂತಿಗೆ (ಪಿ.ಸಿ) ಶೇ. 5 ರ ಮೊತ್ತಕ್ಕೆ ನಿಗಮದ ಹೆಸರಿಗೆ ಡಿಮಾಂಡ್ ಡ್ರಾಫ್ಟ್ ಸಲ್ಲಿಸಬೇಕು.
- ಆಯಾ ಉದ್ದೇಶಕ್ಕೆ ನಿಗದಿಯಾದ ಮಾರ್ಗಸೂಚಿಯಂತೆ ಘಟಕ ಸ್ಥಾಪಿಸಲು ಆಗತ್ಯವಿರುವಷ್ಟು ಹಣಕಾಸನ್ನು ನಿಗಮವು ಫಲಾನುಭವಿಗೆ ಒಂದೇ ಕಂತಿನಲ್ಲಿ/ಹಲವು ಕಂತುಗಳ ಮೂಲಕ ಬಿಡುಗಡೆ ಮಾಡುವುದು.

**ನೇರಸಾಲ ಯೋಜನೆಯಡಿ ಒದಗಿಸಬೇಕಾದ ಪೂರಕ ಭದ್ರತೆಯ ವಿವರ (ರೂಪಾಯಿಗಳಲ್ಲಿ)**

| ಕ್ರ.ಸಂ | ಇಂದ | ವರೆಗೆ | ಘಟಕ ವೆಚ್ಚದ ಶೇಕಡ |
|---|---|---|---|
| 1 | | 35000 | ಇಲ್ಲ |
| 2 | 35001 | 100000 | 10 |
| 3 | 100001 | 250000 | 15 |
| 4 | 250001 | 500000 | 20 |
| 5 | 500001 | 700000 | 25 |
| 6 | 700000 ಮೇಲ್ಪಟ್ಟು | | 50 |

ಒಂದಕ್ಕಿಂತ ಹೆಚ್ಚು ಕಂತುಗಳಲ್ಲಿ ಹಣ ಬಿಡುಗಡೆಯಾದಲ್ಲಿ ಕಂತಿನ ಹಣವನ್ನು ಫಲಾನುಭವಿಯು ಸಮರ್ಪಕವಾಗಿ ನಿಗದಿತ ಉದ್ದೇಶಕ್ಕೆ ಬಳಸಿರುವ ಕುರಿತು ತಾ.ಅ.ಅ.ಗಳಿಂದ ಸ್ಥಳ ಪರಿಶೀಲನಾ ವರದಿ ಪಡೆದು ಮುಂದಿನ ಕಂತುಗಳನ್ನು ಬಿಡುಗಡೆ ಮಾಡುವುದು.

- ಈ ಯೋಜನೆಯಡಿ ಸೃಷ್ಠಿಸಲಾದ ಸ್ವತ್ತನ್ನು ಸಮಗ್ರ ವಿಮೆಗೊಳಪಡಿಸುವುದು ಕಡ್ಡಾಯವಾಗಿರುತ್ತದೆ.
- ಫಲಾನುಭವಿಯು ಉತ್ಪಾದಕ ಘಟಕವನ್ನು ಸ್ಥಾಪಿಸಿ ಫೋಟೋ ಸಮೇತ ನಿಗಮಕ್ಕೆ ಮಾಹಿತಿ ನೀಡುವುದು.
- ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ನಿಗಮದ ಸಹಾಯಧನ/ಬೀಜಧನ ಹಾಗೂ ಎನ್.ಎಸ್.ಎಫ್.ಡಿ.ಸಿ ಅವದಿ ಸಾಲವನ್ನು ನಿಗದಿತ ಉದ್ದೇಶಕ್ಕೆ ಫಲಾನುಭವಿಯು ಬಳಕೆ ಮಾಡಿ ಉತ್ಪಾದಕ ಘಟಕ ಪ್ರಾರಂಭಿಸಿರುವ ಕುರಿತು ಸ್ಥಳ ಪರಿಶೀಲನಾ ವರದಿಯನ್ನು ಜಿಲ್ಲಾ ಕಛೇರಿಗೆ ಸಲ್ಲಿಸುವರು.
- ನಿಗಮದಿಂದ ಬಿಡುಗಡೆ ಮಾಡಲಾದ ಸಹಾಯಧನ/ಬೀಜಧನ ಹಾಗೂ ಎನ್.ಎಸ್.ಎಫ್.ಡಿ.ಸಿ ಅವಧಿ ಸಾಲವನ್ನು ನಿಗದಿತ ಉದ್ದೇಶಕ್ಕೆ ವಿನಿಯೋಗಿಸಿರುವ ಕುರಿತು ನಿಗಮದ ಕೇಂದ್ರ ಕಛೇರಿಗೆ ನಿಗದಿತ ನಮೂನೆಯಲ್ಲಿ ಬೀಜಧನ ಹಾಗೂ ಎನ್.ಎಸ್.ಎಫ್.ಡಿ.ಸಿ ಅವಧಿ ಸಾಲ ವಿನಿಯೋಗ ಪ್ರಮಾಣ ಪತ್ರ ಸಲ್ಲಿಸುವುದು.





